# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 673/2020

ಸಿ.ಡಬ್ಲ್ಯೂ- 1 ಪಿ.ಡಬ್ಲ್ಯೂ-1

ಸಾಕ್ಷಿಯ ಹೆಸರು : ಗಾಯತ್ರಿ ಬಡಿಗೇರ

ಗಂಡನ ಹೆಸರು : ಮಹಾರುದ್ರಪ್ಪ

ವಯಸ್ಸು : 30 ವರ್ಷ

ಉದ್ಯೋಗ : ಕೂಲಿ

ವಾಸಸ್ಥಳ : ಹಳ್ಳೂರ

**ದಿನಾಂಕಃ 01-08-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಮೃತ ಮಹಾರುದ್ರಪ್ಪ ನನ್ನ ಪತಿ ಆಗಬೇಕು. ಚಾಸಾ-7 ನನ್ನ ಅತ್ತೆ ಆಗಬೇಕು. ದಿ.19-08-2020 ರಂದು ನನ್ನ ಮಗನ ಹುಟ್ಟಿಹಬ್ಬದ ಸಲುವಾಗಿ ಬಟ್ಟೆತರಲು ಹೋದಾಗ ಮರಣ ಹೊಂದಿದರು. ಚಾಸಾ-4 ರವರು ಕಮತಗಿ ಬಾಗಲಕೋಟ ರಸ್ತೆಯ ಕಡೆ ನನ್ನ ಗಂಡ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಕರೆ ಮಾಡಿ ತಿಳಿಸಿದರು. ನಾನು ಮತ್ತು ಚಾಸಾ-4 ರವರು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಗಂಡ ಸ್ಥಳದಲ್ಲಿಯೇ ಮರಣ ಹೊಂದಿರುತ್ತಾರೆ. ವಾಹನ ಅಪಘಾತಪಡಿಸಿದವನ ಹೆಸರು ಚಾಸಾ-4 ರವರು ದಿಗಂಬರ ಎಂದು ನನಗೆ ತಿಳಿಸಿದರು. ನಾನು ದೂರನ್ನು ನೀಡಿರುತ್ತೇನೆ. ಚಾಸಾ-5 ರವರು ಪಿರ್ಯಾಧಿಯನ್ನು ಬರೆದಿರುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಯನ್ನು ಕೋರಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಸಅ ರವರಿಂದಃ**

ಚಾಸಾ-4 ರವರು ದಿನಾಂಕ 19-08-2020 ರಂದು ನನ್ನ ಗಂಡ ಬಟ್ಟೆತರಲು ಹೋದಾಗ ಕಮತಗಿ ಬಾಗಲಕೋಟ ಎಸ್.ಎಸ್. 20 ರಸ್ತೆಯಲ್ಲಿ ಭಾರತ ಗ್ಯಾಸ್ ಗುಡಾವಣೆ ಹತ್ತಿರ ಒಮ್ಮೆಲೆ ಬ್ರೇಕ್ ಹಾಕಿ ಅಪಘಾತಪಡಿಸಿದ ನಂತರ ಈ ಅಪಘಾತದಿಂದ ನನ್ನ ಗಂಡ ಮೃತನಾಗಿರುತ್ತಾರೆ ಎಂದು ತಿಳಿಸಿದರು

ಎಂದರೆ ಸರಿ. ಚಾಸಾ-4 ಸದರಿ ಮೋಟರ ಸೈಕಲ ನಂ. ಕೆಎ 29 ಕ್ಯೂ 2828 ಎಂದು ಹೇಳಿದನು ಎಂದರೆ ಸರಿ. ನಂತರ ನಾನು ಮತ್ತು ಚಾಸಾ-7 ಮತ್ತು 8 ರವರು ಘಟನಾ ಸ್ಥಳಕ್ಕೆ ಹೋಗಿ ನೋಡಿ ನನ್ನ ಗಂಡನ ತಲೆಯ ಮೇಲೆ ಭಾಗಿ ಗಾಯವಾಗಿ ರಕ್ತ ಹರಿದು ಸ್ಥಳದಲ್ಲಿ ಮರಣ ಹೊಂದಿರುತ್ತಾನೆ ಎಂದರೆ ಸರಿ. ನಂತರ ದಿ.20-08-2020 ರಂದು ನಾನು ತೋರಿಸಿದ ಚಾಸಾ-2 ಮತ್ತು 3 ರ ಸಮಕ್ಷಮ ಗುನ್ನಾ ಜಾಗ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ.

ಸಾಕ್ಷಿ ಈಗ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಈಗ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 7 ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಡಿ. ವಕೀಲರಿಂದಃ**

ನನ್ನ ಮಗನ ಹುಟ್ಟಿದ ದಿನಾಂಕ 20-08-2015 ಇರುತ್ತದೆ. ನಾನು ದೂರನ್ನು ದಿ. 19-08-2020 ರಂದು ನೀಡಿರುತ್ತೇನೆ. ಚಾಸಾ-4 ರವರು ನನಗೆ ಕರೆ ಮಾಡಿದಾಗ 3.40 ಆಗಿತ್ತು. ಅಪಘಾತದ ಸ್ಥಳದಿಂದ ನಮ್ಮ ಊರಿಗೆ 30 ಕೀ.ಮಿ. ಅಂತರ ಇದೆ. ನಾನು ಮನೆ ಬಿಟ್ಟಾಗ ಸಮಯ ಎಷ್ಟು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮದು ಯಾವುದು ವಾಹನ ಇರುವುದಿಲ್ಲ. ಸದರಿ ಆರೋಪಿತನಿಗೆ ಮತ್ತು ನನ್ನ ಗಂಡನಿಗೆ ಯಾವ ರೀತಿ ಪರಿಚಯ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಬಾಗಲಕೋಟೆಯವನು ಇರುತ್ತಾನೆ. ಪಿರ್ಯಾದಿಯನ್ನು ನಾನು ಹೇಳಿದಾ ಹಾಗೆ ಬರೆದಿರುತ್ತಾರೆ. ಚಾಸಾ-5 ರವರು ನನಗೆ ಪರಿಚಯ ಇರುತ್ತಾರೆ. ಅಪಘಾತ ಸ್ಥಳದಲ್ಲಿ ನನ್ನ ಗಂಡ ಜೋಲಿ ಹೋಗಿ ತಾನೇ ಬಿದ್ದು ಮರಣ ಹೊಂದಿರುತ್ತಾನೆ ಎಂದರೆ ಸರಿ ಅಲ್ಲ. ಅಪಘಾತದಲ್ಲಿ ಆರೋಪಿಗೂ ಗಾಯವಾಗಿತ್ತು ಎಂದರೆ ಸರಿ. ಆರೋಪಿತನ ಯಾವುದೇ ತಪ್ಪಿಲ್ಲ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ಹುನಗುಂದ ಇವರ</u>**

**<u>ನ್ಯಾಯಾಲಯದಲ್ಲಿ</u>**

<u>ಕ್ರಿಮಿನಲ್ ಮೊಕದ್ದಮೆ ನಂಃ 673/2020</u>

ಸಿ.ಡಬ್ಲ್ಯೂ- 3 ಪಿ.ಡಬ್ಲ್ಯೂ-2

ಸಾಕ್ಷಿಯ ಹೆಸರು : ಶಿವನಗೌಡ ಮನಿನಾಗರ

ತಂದೆಯ ಹೆಸರು : ಮುದುಕಪ್ಪಗೌಡ

ವಯಸ್ಸು : 72 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಹಳ್ಳೂರ

**<u>ದಿನಾಂಕಃ 01-08-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಸಅ ರವರಿಂದಃ</u>**

ಎಸ್.ಎಚ್. 20 ರಸ್ತೆಯ ಮೇಲೆ ನನ್ನ ಮತ್ತು ಚಾಸಾ-2 ರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಯನ್ನು ಕೋರಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಸಅ ರವರಿಂದಃ**

ದಿ.20-08-2020 ರಂದು ಚಾಸಾ-1 ರವರು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾಸಾ-2 ಸಮಕ್ಷಮ ಗುನ್ನಾ ಜಾಗ ಪಂಚಮೆಯನ್ನು ಮಾಡಿರುತ್ತಾರೆ. ಸದರಿ ಕಾಲಕ್ಕೆ ಕೆಎ 29 ಕ್ಯೂ 2828 ನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿ ಈಗ ಗುನ್ನಾ ಜಾಗ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಬಿ. ವಕೀಲರಿಂದಃ**

ಪಂಚನಾಮೆಯನುನ ಬಾಗಲಕೋಟೆ ಯ ರಸ್ತೆಯ ಮೇಲೆ ಕಮತಗಿ ಹತ್ತಿರ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಯಾರು ಯಾರು ಇದ್ದರು ಎಂದರೆ ನನಗೆ ನೆನಪಿಲ್ಲ. ಗುನ್ನಾ ಜಾಗೆಯನ್ನು

ನಮಗೆ ಯಾರು ತೋರಿಸಿಲ್ಲ ಸ್ವತಃ ನಾವೇ ಅಲ್ಲಿಗೇ ಹೋಗಿರುತ್ತೇವೆ. ಮಲ್ಲಪ್ಪ ಕೊಟ್ನಳ್ಳಿ ಕರೆ ಮಾಡಿದ್ದರಿಂದ ನಾನು ಗುನ್ನಾ ಜಾಗಕ್ಕೆ ಹೋಗಿದ್ದೆ. ನನ್ನ ಸಮಕ್ಷಮ ಜಪ್ತು ಮಾಡಿದ ಗಾಡಿ ನಂ. ನನಗೆ ಗೊತ್ತಿಲ್ಲ. ಪೋಲಿಸರು ಬರೆದ ಮೇರೆಗೆ ನಾನು ಪಂಚನಾಮೆ ಸಹಿ ಮಾಡಿರುತ್ತೇನೆ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.